



## ಪೇರಿನ ಕುರುವೆ ಕಂಡೀರಾ?

ಪೇರಿನ ಕುರುವೆ ಎಂದರೆ ತುಳುಭಾಷೆಯಲ್ಲಿ ಹಾಲಿನ ಬುಟ್ಟಿ ಎಂದರ್ಥ. ತೆಂಗಿನ ಕಾಯಿಯನ್ನು ರುಬ್ಬಿ, ಅದರ ಮಿಶ್ರಣವನ್ನು ಇದರಲ್ಲಿ ಹಾಕಿ ಹಿಂಡಿದರೆ ಅದರ ಹಾಲು ಮಾತ್ರ ಹೊರಬರುತ್ತದೆ. ಒಂದು ಕಾಲದಲ್ಲಿ ಅಡುಗೆಗೆ, ನಿತ್ಯದ ಬಳಕೆಗೆ ಇದರ ಉಪಯೋಗವಿತ್ತು. ಎಣ್ಣೆಯಲ್ಲಿ ಕರಿದ ತಿಂಡಿಯನ್ನು ಇದರಲ್ಲಿ ಹಾಕಿದರೆ ಎಣ್ಣೆ ಸರಾಗವಾಗಿ ಕೆಳಗಿಳಿದು, ಟಿಶ್ಯೂ ಕಾಗದದಂತೆ ಕೆಲಸ ಮಾಡುತ್ತಿತ್ತು.

ಈ ಬುಟ್ಟಿಯ ವಿನ್ಯಾಸವೇ ವಿಭಿನ್ನ. ಕೆಳಗೆ ಚೂಪಾಗಿ, ಮೇಲೆ ಅಗಲವಾಗಿದೆ. ಪಾತ್ರೆಯ ಮೇಲೆ ಸರಿಯಾಗಿ ಕುಳಿತುಕೊಳ್ಳುವ ರಚನೆ ಹೊಂದಿದೆ. ಬಿದಿರಿನ ಬುಟ್ಟಿಯನ್ನು ಮಾಡುವ ಕೆಲಸಗಾರರು ಇದನ್ನು ಬಳ್ಳಿಯಿಂದ ತಯಾರಿಸುತ್ತಾರೆ. ನೀರಿನಲ್ಲಿ ನೆನೆಸಿ, ಅದರ ಕಂದುಬಣ್ಣದ ಸಿಪ್ಪೆಯನ್ನು ಕೆರೆಸಿದ ನಂತರ ನಾನಾ ರೀತಿಯ ಬುಟ್ಟಿಗಳಾಗಿ ಸಿದ್ಧವಾಗುತ್ತವೆ. ಕಾಂಪೌಂಡ್ ಗೋಡೆಗಳು ಬಂದು ಈ ಬಳ್ಳಿಗಳು ನಾಶವಾಗುತ್ತಿವೆ. ಇದರಲ್ಲಿ ಸಣ್ಣ ಸಣ್ಣ ರಂಧ್ರಗಳಿರುವುದರಿಂದ ಕ್ರಿಮಿಕೀಟಗಳು ಸೇರಿಕೊಳ್ಳುತ್ತವೆ. ಸ್ವಚ್ಛತೆಗೆ ಪೂರಕವಲ್ಲದ ಕಾರಣಕ್ಕೆ ಇವು ಮೂಲೆಗುಂಪಾಗುತ್ತಿವೆ. ಕರಾವಳಿ ಭಾಗದ ಕೆಲವು ಮನೆಗಳಲ್ಲಿ ಈಗಲೂ ಇವುಗಳನ್ನು ಕಾಣಬಹುದು.

**–ಪುಷ್ಪಾ ಎನ್.ಕೆ. ರಾವ್, ಉಡುಪಿ**

## ಮರವೇರಿದವೆ ಪಿಂಕ್ ಚೆಂಡುಗಳು?

ಈ ಚಿತ್ರವನ್ನು ನೋಡಿದಾಕ್ಷಣ ಎಲೆಯಿಲ್ಲದ ಈ ಬೋಳುಮರದಲ್ಲಿ ಪಿಂಕ್ ಬಣ್ಣದ ಚೆಂಡುಗಳನ್ನು ಇಟ್ಟವರು ಯಾರು ಎಂಬ ಪ್ರಶ್ನೆ ಸಹಜವಾಗಿ ಮೂಡುತ್ತದೆ. ಹತ್ತಿರ ಹೋಗಿ ಗಮನಿಸಿದರೆ, ಅವು ಪಿಂಕ್ ಬಣ್ಣದ ಚೆಂಡುಗಳಲ್ಲ ಮರ ಬಿರಿದ ಹೂಗಳೆಂದು ಗೊತ್ತಾಗುತ್ತೆ. ಇವು ದುಂಡನೆ ಚೆಂಡಿನಂತೆ ಇರುವುದು ಬಹಳ ಅಪರೂಪ. ತಬುಬುಯಾ ರೋಸಿಯ ಎಂಬ ಜಾತಿಯ ಮರವಿದು. ಚಳಿಯ ಸೋಂಕಿಗೆ ಎಲೆಯುದುರಿಸಿ ಪಿಂಕ್ ಹೂಗಳ ಛಾಯೆಯನ್ನು ವರ್ಷ ಮುಗಿಯುವ ಹೊತ್ತಿಗೆ ತಂದಿಡುತ್ತದೆ. ಹಸಿರೆಲೆಗಳು ಕ್ರಮೇಣ ಉದುರಿ ಒಂದು ಹಂತಕ್ಕೆ ಮರವಿಡೀ ಗುಂಡನೆಯ ಪುಷ್ಪಗುಚ್ಛಗಳನ್ನು ಧರಿಸಿಬಿಡುತ್ತದೆ. ಹೂವುಗಳು ಟ್ರಂಪೆಟ್, ಅಂದರೆ ತುತ್ತೂರಿಯ ಆಕಾರದಲ್ಲಿವೆ. ನಾಲ್ಕೈದು ದಿನಗಳ ಮಟ್ಟಿಗೆ ಅರಳಿ ಮುದುಡದೆ ಕಂಗೊಳಿಸುವ ಹೂವುಗಳು ಅಷ್ಟೇನು ಸುವಾಸನೆಯುಕ್ತವಲ್ಲ. ಇದು ಬೀದಿಬದಿಯ ಅವೆನ್ಯೂ ಮರಗಳಲ್ಲೂ ಒಂದು. ಧಾರವಾಡದ ಎಸ್.ಡಿ.ಎಂ. ಎಂಜಿನಿಯರಿಂಗ್ ಕಾಲೇಜಿನ ಪ್ರಾಂಗಣದಲ್ಲಿ ಆಕರ್ಷಕವಾಗಿ ಈ ಮರ ಕಂಡಿತು.

**–ವಿಶ್ವನಾಥ ಭಟ್, ಧಾರವಾಡ**





## ಹಾರ್ನ್‌ಬಿಲ್ ಅಲ್ಲ, ತೆಂಗಿನ ಚಿಗುರು

ಮಾನವರ ಕಲ್ಪನೆಗಿಂತಲೂ ಪ್ರಕೃತಿಯ ಸೃಜನಶೀಲತೆಯೇ ವಿಶೇಷವಾಗಿರುತ್ತದೆ. ಚಿತ್ರವು ಈ ಮಾತಿಗೆ ಉದಾಹರಣೆಯಂತಿದೆ. ಅಂಕೋಲಾದ ಪುರಲಕ್ಕಿಬೇಣದ ನಿವಾಸಿ ರೇಷ್ಮಾ ಆನಂದ್ ಅವರ ಮನೆಯಲ್ಲಿ ಕಾಯಿ ಸುಲಿದಾಗ ಕಂಡ ಅಚ್ಚರಿಯಿದು. ಚಿತ್ರದಲ್ಲಿ ಕಾಣುವ ಮೊಳಕೆಯೊಡೆದ ತೆಂಗಿನ ಕಾಯಿ, ನೋಡಲು ಹಾರ್ನ್‌ಬಿಲ್ ಪಕ್ಷಿಯ ಮೂತಿಯಂತೆ ಕಾಣಿಸುತ್ತದೆ. ಅದರ ಬಣ್ಣ ಮತ್ತು ವಕ್ರತೆಯೆಲ್ಲ ಪಕ್ಷಿಯಂತೆಯೇ ಕಾಣುತ್ತದೆ. ಸಾಮಾನ್ಯವಾಗಿ ಹಿತ್ತಲಿನಲ್ಲಿ, ತೋಟಗಳಲ್ಲಿ ತೆಂಗಿನ ಕಾಯಿ ಮೊಳೆಕೆಯೊಡೆಯುವ ದೃಶ್ಯ ಸಹಜ. ಆದರೆ ಪ್ರಕೃತಿ ಕೆಲವೊಮ್ಮೆ ಈ ರೀತಿ ವಿಶಿಷ್ಟ ರೂಪಗಳನ್ನು ಕೊಟ್ಟು ನಮ್ಮನ್ನು ಅಚ್ಚರಿಪಡಿಸುತ್ತದೆ.

**–ಪ್ರವೀಣ್ ಗೌಡ ಬೆಳಂಬಾರ, ಅಂಕೋಲಾ**